# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

**<u>ಕಛೇರಿ ಆದೇಶ</u>**

**ವಿಷಯ:** 2013-14 ಮತ್ತು 2014-15ನೇ ಸಾಲುಗಳಲ್ಲಿ ವಿಶ್ವವಿದ್ಯಾನಿಲಯದ ಇನ್‌ಹೌಸ್ ನಾನ್ ಟೆಕ್ನಿಕಲ್ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ: ಇಡಿ 54 ಯುಓವಿ 2017 (ಭಾಗ-1) ದಿನಾಂಕ:05.03.2018ರನ್ವಯ ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ವ್ಯಾಸಂಗ ಮುಂದುವರೆಸುವ ಬಗ್ಗೆ.

**ಉಲ್ಲೇಖ:**

1) ಸರ್ಕಾರಿ ಆದೇಶ ಸಂಖ್ಯೆ: ಇಡಿ 54 ಯುಓವಿ 2017 (ಭಾಗ-1) ದಿನಾಂಕ:05.03.2018 ಮತ್ತು 03.05.2018ರ
2) ದಿನಾಂಕ:22.03.2018 ರಂದು ಜರುಗಿದ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಯ 44ನೇಸಭೆಯ ಶಿಫಾರಸ್ಸು
3) ದಿನಾಂಕ: 24.03.2018ರಂದು ಜರುಗಿದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿಯ 150ನೇ ಸಭೆಯ ತೀರ್ಮಾನ
4) ದಿನಾಂಕ: 13.07.2019ರಂದು ಜರುಗಿದ ವಿಶ್ವವಿದ್ಯಾನಿಲಯದ 11ನೇ ವಿಶೇಷ ಶೈಕ್ಷಣಿಕ ಮಂಡಳಿಯ ಸಭೆಯ ನಿರ್ಣಯ.
5) ದಿನಾಂಕ: 05.08.2019ರಂದು ಜರುಗಿದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿಯ 157ನೇ ಸಾಮಾನ್ಯ ಸಭೆಯ ತೀರ್ಮಾನ
6) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:21.08.2019

* * * * *

**<u>ಪ್ರಸ್ತಾವನೆ:</u>**

ವಿಶ್ವವಿದ್ಯಾನಿಲಯವು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿನಿಯಮ-1992ರನ್ವಯ ಸ್ಥಾಪಿಸಲ್ಪಟ್ಟ ರಾಜ್ಯದ ಏಕೈಕ ಮುಕ್ತ ವಿಶ್ವವಿದ್ಯಾನಿಲಯವಾಗಿದ್ದು, ಸದರಿ ಅಧಿನಿಯಮದಡಿ ಕಾರ್ಯನಿರ್ವಹಿಸುತ್ತಿರುತ್ತದೆ. ವಿಶ್ವವಿದ್ಯಾನಿಲಯದ ಇನ್ ಹೌಸ್ ನಾನ್ ಟೆಕ್ನಿಕಲ್ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹಿಂದಿನ Distance Education Counsel (DEC) New Delhi ಯು 2013ನೇ ಸಾಲಿನವರೆಗೆ ಮಾನ್ಯತೆಯನ್ನು ನೀಡಿರುತ್ತದೆ. ವಿಶ್ವವಿದ್ಯಾನಿಲಯದ ವಿಶ್ವವಿದ್ಯಾನಿಲಯದ ಇನ್ ಹೌಸ್ ನಾನ್ ಟೆಕ್ನಿಕಲ್(ತಾಂತ್ರಿಕೇತರ) ಕೋರ್ಸ್‌ಗಳು DEC, New Delhi ಮತ್ತು University Grants Commission (UGC)ಯ ನಿಯಮಾವಳಿಗಳಿಗನುಗುಣವಾಗಿಯೇ ನಿರ್ವಹಿಸಲ್ಪಡುತ್ತಿದ್ದು, ಅವುಗಳ ಬಗ್ಗೆ UGCಯು ಯಾವುದೇ ಸಂದರ್ಭದಲ್ಲಿ ಆಕ್ಷೇಪಣೆ/ತಕರಾರು ವ್ಯಕ್ತಪಡಿಸಿರುವುದಿಲ್ಲವೆಂಬುದು ನಿರ್ವಿವಾದಿತ.



Scanned by CamScanner

UGCಯು ದಿನಾಂಕ: 16.06.2015ರ ಸಾರ್ವಜನಿಕ ತಿಳುವಳಿಕೆ ಹೊರಡಿಸಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮಗಳ ಮಾನ್ಯತೆಯು 2013ನೇ ಸಾಲಿನಿಂದ ಈಚೆಗೆ ನವೀಕರಣಗೊಂಡಿರುವುದಿಲ್ಲವೆಂದು ಪೂರ್ವಾನ್ವಯವಾಗಿ ಘೋಷಿಸಿರುತ್ತದೆ. ಸದರಿ ಸಾರ್ವಜನಿಕ ತಿಳುವಳಿಕೆಯಲ್ಲಿಯೂ ಸಹ UGCಯು ಹಿಂದೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಪಾಲುದಾರ ಸಂಸ್ಥೆಗಳ ಮೂಲಕ ಪ್ರವೇಶಾತಿ ನೀಡಲಾಗುತ್ತಿದ್ದ ತಾಂತ್ರಿಕ, ವೃತ್ತಿಪರ ಮತ್ತು ಡಿಪ್ಲೋಮೊ ಕೋರ್ಸ್‌ಗಳ ನ್ಯೂನ್ಯತೆಗಳನ್ನು ಮಾತ್ರ ಉಲ್ಲೇಖಿಸಿದ್ದು, ವಿಶ್ವವಿದ್ಯಾನಿಲಯದ ಇನ್‌ಹೌಸ್ ನಾನ್ ಟೆಕ್ನಿಕಲ್ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ UGC ಆಗಲಿ ಅಥವಾ ಡಿಸೆಂಬರ್ 2015ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದ UGCಯ ಉನ್ನತ ಮಟ್ಟದ ತಜ್ಞರ ಸಮಿತಿಯಾಗಲಿ ಯಾವುದೇ ರೀತಿಯ ಪ್ರತಿಕೂಲ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ.

UGCಯು ದಿನಾಂಕ: 16.06.2015ರ ಸಾರ್ವಜನಿಕ ತಿಳುವಳಿಕೆ ಹೊರಡಿಸುವಷ್ಟರಲ್ಲಿ ವಿಶ್ವವಿದ್ಯಾನಿಲಯದಲ್ಲಿ 2013-14 ಹಾಗೂ 2014-15ನೇ ಸಾಲಿನ ಪ್ರವೇಶಾತಿಗಳು ನಿರ್ವಹಿಸಲ್ಪಟ್ಟಿದ್ದು, ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಇಡಿ 49 ಯುಓವಿ 2014 (ಭಾ) ದಿನಾಂಕ:03.12.2015 ಅನ್ವಯ 02 ಮತ್ತು 03ನೇ ವರ್ಷದ ಪ್ರವೇಶಾತಿಯನ್ನು ಮುಂದುವರೆಸಲು ಕ್ರಮವಹಿಸಲಾಗಿರುತ್ತದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚಿಸಲ್ಪಟ್ಟಿದ್ದ ಉನ್ನತ ಮಟ್ಟದ ತಜ್ಞರ ಸಮಿತಿಯ ವರದಿಯನ್ನಾಧರಿಸಿ ರಾಜ್ಯ ಸರ್ಕಾರವು ಉಲ್ಲೇಖ-1ರ ಆದೇಶ ಹೊರಡಿಸಿ 2013-14 ಮತ್ತು 2014-15ನೇ ಸಾಲುಗಳಲ್ಲಿ ಕನಾಟಕ ರಾಜ್ಯ ಮುಕ್ತ ವಿಶ್ವವಿದ್ಯಅನಿಲಯದಲ್ಲಿ ಪ್ರವೇಶಾತಿ ಪಡೆದು ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಲ್ಲಿ ತೇರ್ಗಡೆಯಾದವರಿಗೆ ಮುಂದಿನ ವ್ಯಾಸಂಗ/ನೇಮಕಾತಿ ಹಾಗೂ ಮುಂಬಡ್ತಿಗಾಗಿ ಪರಿಗಣಿಸಲು ಆದೇಶಿಸಿರುತ್ತದೆ.

ಉಲ್ಲೇಖ-1ರ ದಿನಾಂಕ: 05.03.2018ದ ಆದೇಶವನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಲು ಉಲ್ಲೇಖ-02 ರಲ್ಲಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಯು ನಿರ್ಣಯಿಸಲಾಗಿದ್ದು, ಅದು ಉಲ್ಲೇಖ-03ರ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದಿಸಲ್ಪಟ್ಟಿರುತ್ತದೆ.

ಉಲ್ಲೇಖ-1ರ ದಿನಾಂಕ: 05.03.2018ದ ಆದೇಶದ ಬಗ್ಗೆ ದಿನಾಂಕ:13.07.2019ರಂದು ಜರುಗಿದ 11ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆಗೆ ಬಂದಿದ್ದು, 2013-14 ಮತ್ತು 2014-15ರ ಶೈಕ್ಷಣಿಕ ವರ್ಷದಲ್ಲಿ ಇನ್-ಹೌಸ್ ತಾಂತ್ರಿಕೇತರ ಕೋರ್ಸ್‌ಗಳಿಗೆ ಕರ್ನಾಟಕ ರಾಜ್ಯದೊಳಗೆ ಪ್ರವೇಶಾತಿ ಪಡೆದು ಸ್ನಾತಕ/ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಕರಾಮುವಿ ನಡೆಸುತ್ತಿರುವ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದು ಮುಂದಿನ ಶೈಕ್ಷಣಿಕ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಿ ಕೊಡಲು ನಿರ್ಣಯಿಸಲಾಗಿರುತ್ತದೆ. ಸದರಿ ದಿನಾಂಕ: 13.07.2019ರ ಶೈಕ್ಷಣಿಕ ಮಂಡಳಿ ಸಭೆಯ ನಿರ್ಣಯವನ್ನು ದಿನಾಂಕ:05.08.2019ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿ 157ನೇ ಸಾಮಾನ್ಯ ಸಭೆಯಲ್ಲಿ ಉಲ್ಲೇಖ-05ರಂತೆ ಅನುಮೋದಿಸಲಾಗಿರುತ್ತದೆ. ಉಲ್ಲೇಖ-05ರ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಅನುಷ್ಠಾನಗೊಳಿಸಲು ಮಾನ್ಯ ಕುಲಪತಿಗಳು ಅನುಮೋದಿಸಿರುವ ಹಿನ್ನಲೆಯಲ್ಲಿ ಈ ಕೆಳಗಿನಂತೆ ಆದೇಶಿಸಲಾಗಿದೆ.



Scanned by CamScanner

**<u>ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ/-1/74/ಪ್ರನ/2019-20 ದಿನಾಂಕ:27.08.2019</u>**

ಪ್ರಸ್ಥಾವನೆಗೊಳಪಟ್ಟು ಮಾನ್ಯ ಕುಲಪತಿಗಳು ಅನುಮೋದನೆ ಮೇರೆಗೆ, 2013-04 ಹಾಗೂ 2014-15ನೇ ಸಾಲುಗಳಲ್ಲಿ ವಿಶ್ವವಿದ್ಯಾನಿಲಯದ ಇನ್ ಹೌಸ್ ನಾನ್ ಟೆಕ್ನಿಕಲ್(ತಾಂತ್ರಿಕೇತರ) ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದು ಪದವಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ 2019-20 ಮತ್ತು ನಂತರದ ಸಾಲುಗಳಲ್ಲಿ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಾತಿ ನೀಡಲು ಆದೇಶಿಸಲಾಗಿದೆ.

ಆದೇಶದ ಮೇರೆಗೆ,

**ಕುಲಸಚಿವ**

**<u>ಪ್ರತಿಗಳು:</u>**

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು
2. ಡೀನ್ (ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು
3. ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು
4. ನಿರ್ದೇಶಕರು, ಐ.ಟಿ ವಿಭಾಗ, ಕರಾಮುವಿ, ಮೈಸೂರು
5. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು, ಕರಾಮುವಿ, ಮೈಸೂರು
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಕರಾಮುವಿ, ಮೈಸೂರು
7. ವಿಶೇಷಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತಕಾರ್ಯಾಲಯ, ಕರಾಮುವಿ, ಮೈಸೂರು
8. ಕರಾಮುವಿ ಎಲ್ಲಾ ಪ್ರಾದೇಶಿಕ ಕೇಂದ್ರಗಳ ನಿರ್ದೇಶಕರುಗಳಿಗೆ
9. ಕುಲಸಚಿವರ ಆಪ್ತಸಹಾಯಕರು, ಕರಾಮುವಿ, ಮೈಸೂರು
10. ಕಛೇರಿ ಪ್ರತಿ.



Scanned by CamScanner